Regd No B G 165 7-1-1970

SATYAVADI Daily, MYSORE 4 ‡ 53 rd Year of Publication

ಸುವರ್ಣ ಮಹೋತ್ಸವ ನಡೆಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಭೂ ಹಂಚಿಕೆಯಲ್ಲಿ ನ್ಯಾಯ ಸಿಗಲೆಂದು ಹರಿಜನರ ಮೆರವಣಿಗೆ

ಲಂಚ ಕೊಟ್ಟ ವ್ಯಕ್ತಿ ಬಂಧನ

ಮೈಸೂರು— ಕಳ್ಳಭಟ್ಟಿ ತಯಾರಿಸಲು ಅವಕಾಶಕ್ಕಾಗಿ ಎ ಎಸ್ ಪಿ ಶ್ರೀ ಯಶವಂತ ಗೋಯಲ್‌ರಿಗೆ ನುಂಡಿ ಮೊಹಲ್ಲಾದ ಅಬ್ದುಲ್ ರಶೀದ್ ಖಾನ್ ಕನಿನಲ್ಲಿ ರೂ 100 ನೋಟು ಕೊಟ್ಟು ಲಂಚ ಕೊಡುವ ಆಪಾದನೆಗೆ ಸಿಕ್ಕಿಬಿದ್ದನು

●

ರಾಜಧನ ರದ್ದಿಗೆ ಪರಿಹಾರಕೊಡದಂತೆ

ನವದೆಹಲಿ— ರಾಜಧನ ರದ್ದಿಗಾಗಿ ಮಾಜಿ ರಾಜರಿಗೆ ಯಾವ ಪರಿಹಾರವನ್ನೂ ಕೊಡಬಾರದೆಂದು ಪಾರ್ಲಿಮೆಂಟು ಸದಸ್ಯ ಶ್ರೀ ಅರ್ಜುನ ಅರೋರ ಪ್ರಧಾನಿಯವರಿಗೆ ಬರೆದಿರುವರ

★

ವಸ್ತುಪ್ರದರ್ಶನ

ದಾವಣಗೆರೆ— ಜಿಲ್ಲಾ ಕಾಂಗ್ರೆಸ್ ವಸ್ತುಪ್ರದರ್ಶನವನ್ನು ತಾ || 9 ರಂದು ಹಳೇ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಉದ್ಘಾಟಿಸುವರು – ಎಂಪಿಸಿಸಿ ಅಧ್ಯಕ್ಷ ಡಾ|| ನಾಗಪ್ಪ ಆಳ್ವಾರವರು ಅಧ್ಯಕ್ಷತೆ ವಹಿಸುವರು.

○

ಲೆ || ಗೌರ್ನರರ ಸಂಬಳ

ನವದೆಹಲಿ— ಕೇಂದ್ರ ಪ್ರದೇಶಗಳ ಲೆ|| ಗೌರ್ನರುಗಳಿಗೆ ಸಂಬಳವನ್ನು ರೂ 3000 ಸಾವಿರದಿಂದ ರೂ 3500 ಕ್ಕೆ ಹೆಚ್ಚಿಸಲು ಕೇಂದ್ರ ಸರಕಾರ ನಿರ್ಧರಿಸಿದೆ – ಇಲ್ಲೀವರೆಗೆ ಅವರಿಗೆ ಕಾರು ಉಚಿತವಾಗಿ ಕೊಡಲಾಗಿತ್ತು ; ಇನ್ನು ಮುಂದೆ ಅದಕ್ಕೆ ಆ ವರು ತಿಂಗಳಿಗೆ ರೂ. 150 ಕೊಡಬೇಕೆಂದೂ ನಿರ್ಧರಿಸಲಾಗಿದೆ.

○

ಹರಿಜನರ ಮೆರವಣಿಗೆ

ಹಾಸನ— ಭೂಮಿ ಹಂಚಿಕೆಯು ನ್ಯಾಯ ದೊರೆಯಲೆಂದು ಭಿತ್ತಿಪತ್ರ ಹಿಡಿದುಕೊಂಡು ಹರಿಜನ ಕೋಮಿನವರು ಭಾನುವಾರ ಶಾಂತತೆಯಿಂದ ಮೆರವಣಿಗೆ ನಡೆಸಿದರು.

★

ರಾಜಾಜಿ ಸಲಹೆ

ಮದರಾಸು— ಹೊಸ ಮತ್ತು ಹಳೆ ಕಾಂಗ್ರೆಸ್ಸಿನವರು ತಮ್ಮ ಚುನಾವಣಾ ಗುರುತಿಗೆ, ಒಬ್ಬರು ಎತ್ತುಗಳನ್ನೂ ಮತ್ತೊಬರು ಚರಕನನ್ನೂ ಇಟ್ಟುಕೊಳ್ಳಲು ಸಲಹೆ ಮಾಡಿದ್ದಾರೆ.

●

144 ನೇ ವಿಧಿ

ಮೈಸೂರು— ಈ ಬೆಳಿಗ್ಗೆ ಜಿಲ್ಲಾ ಕಾಂಗ್ರೆಸ್ ಕಾಂಗ್ರೆಸ್ ಕಚೇರಿಯಲ್ಲಿ ಹಳೆ ಕಾಂಗ್ರೆಸ್ ಮತ್ತು ಹೊಸ ಕಾಂಗ್ರೆಸ್ಸಿನವರು ಸಭೆ ಕರೆದಿದ್ದರು – ಹಳೇ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷರು ದೂರು ಕೊಟ್ಟರು – ಆ ಸ್ಥಳಕ್ಕೆ 100 ಗಜ ಆವರಣದಲ್ಲಿ ಯಾರೂ ಸಭೆ ನಡೆಸದಂತೆ 144 ನೇ ವಿಧಿ ಜಾರಿ ಮಾಡಲಾಯಿತು.

★

ಮುಷ್ಕರ

ಕಾನ್ಪುರ— ರಕ್ಷಣಾ ನೌಕರರು ಸಾಮೂಹಿಕ ಚಳವಳಿ ಹೂಡಲು ನಿರ್ಧರಿಸಿರುವುದಾಗಿ ವರದಿಯಾಗಿದೆ.

★

ಉಪವಾಸ

ಸಿಬ್ಸಾಗರ— ಎಣ್ಣೆ ಕಮಿರ್ಷನ 270 ಕಾರ್ಮಿಕರು ಭಾನುವಾರದಿಂದ ಅನಿರ್ದಿಷ್ಟ ಕಾಲ ಉಪವಾಸ ಪ್ರಾರಂಭಿಸಿದ್ದಾರೆ.

ಪೌರಸಭೆಯಲ್ಲಿನ ಸ್ವಾರಸ್ಯ

ಪ್ರೊಡಟ್ಟೂರು— ಇಲ್ಲಿಯ ಮುನಿಸಿಪಲ್ ಕಾರ್ಯಕಾರಿ ಸಮಿತಿ ನಿರ್ಣಯದಂತೆ ಕಾರ್ಯದರ್ಶಿಯವರು ಕೆಲವು ಮಂದಿ ನೌಕರರ ವರ್ಗಾವಣೆ ಬಗ್ಗೆ ಆಜ್ಞೆ ಮಾಡಿದರು – ಈ ಆಜ್ಞೆಯನ್ನು ಮುನಿಸಿಪಲ್ ಅಧ್ಯಕ್ಷರು ತಡೆದು, ಯಾರೂ ಕಾರ್ಯದರ್ಶಿಯರ ಆಜ್ಞೆಯಂತೆ ನಡೆಯಬಾರದೆಂದು ತಿಳಿಸಿದರು – ಕಾರ್ಯಕಾರಿ ಸಮಿತಿಯೆ ಹೆಚ್ಚು ಮಂದಿ ಕಾರ್ಯದರ್ಶಿಯರ ಆಜ್ಞೆಯಂತೆ ನಡೆಯಲು ನೌಕರರಿಗೆ ಹೇಳಿದರು – ಕಾರ್ಯಕಾರಿ ಸಮಿತಿಯಲ್ಲಿ ವಿರೋಧ ಪಕ್ಷದವರು ಹೆಚ್ಚು ಮಂದಿ ಇದಾರೆ.

★

ಪಟ್ಟಣಿಗರ ಸಂಖ್ಯೆ

ಶಿವಮೊಗ್ಗ— 1961 ನೇ ಜನಗಣತಿ ಪ್ರಕಾರ ಮೈಸೂರು ರಾಜ್ಯದ ಪಟ್ಟಣಿಗರ ಸಂಖ್ಯೆ ಶೇಕಡಾ 22 84 ಎಂದು ಹೇಳಲಾಗಿದೆ.

★

ಕ್ರೀಡಾ ಕಾಲದಲ್ಲಿ ದೌರ್ಜನ್ಯರ ಹಾವಳಿ

ರಂಗೂನ್— ಇಲ್ಲಿಗೆ 500 ಮೈಲಿ ದೂರದ ಲಕ್ಷ್ಮಿಯೋನಲ್ಲಿ ಸ್ವಾತಂತ್ರ ದಿನೋತ್ಸವದ ಕ್ರೀಡಾ ನಡೆಯುತ್ತಿದ್ದಾಗ ದೌರ್ಜನ್ಯರು ಬಾಂಬು ಎಸೆದು ಗುಂಡುಹಾರಿಸಿದ ಪರಿಣಾಮವಾಗಿ 8 ಮಂದಿ ಸತ್ತು 17 ಮಂದಿ ಗಾಯಗೊಂಡರು.

○

ಹಿಮದರಾಶಿ ಹಾವಳಿ

ಬುನೆನಸ್ ಐರಿಸ್— ಪಶ್ಚಿಮ ಅರ್ಜೆಂಟೈನಾದ ಮೆಂಡೋಸಾ ನಗರವು ಪರ್ವತದಿಂದ ಕೊಚ್ಚಿಕೊಂಡುಬಂದ ಹಿಮದರಾಶಿ ಮಣ್ಣುಕಲ್ಲುಗಳಿಂದ ಮುಚ್ಚಿಹೋಗಿದೆ ; 36 ಮಂದಿ ಸತ್ತು ನೂರಾರು ಮಂದಿ ಗಾಯಗೊಂಡು ಸಾವಿರಾರು ಮಂದಿ ಮನೆಮಠವಿಲ್ಲದವರಾಗಿದ್ದಾರೆ.

ಎರಡು ಕ್ಷೇತ್ರಗಳಿಗಿಂತ ಹೆಚ್ಚಿಲ್ಲ

ಬೊಂಬಾಯಿ— ಪಾರ್ಲಿಮೆಂಟಿಗೆ ಮತ್ತು ವಿಧಾನಸಭೆಗೆ ಉಮೇದುವಾರರು ಎರಡು ಕ್ಷೇತ್ರಗಳಿಗಿಂತ ಹೆಚ್ಚಿಗೆ ನಿಲ್ಲಲು ಅವಕಾಶ ಕೊಡಬಾರದೆಂದು ಚುನಾವಣಾಧಿಕಾರಿಗಳ ಸಭೆಯಲ್ಲಿ ಯೋಜಿಸಲಾಯಿತು.

★

ಗರ್ಭಪಾತ ಪ್ರಕರಣ

ಮಂಜೇಶ್ವರ— ಒಬ್ಬ ಮಹಿಳೆಯು ಗರ್ಭಪಾತಕ್ಕಾಗಿ ಏನೋ ಔಷಧ ಸೇವಿಸಿ ಸತ್ತ ಸಂದರ್ಭದಲ್ಲಿ ಒಬ್ಬರ ದಸ್ತಗಿರಿಯಾಗಿದೆ.

○

ಹರತಾಳ

ಚಿಕ್ಕಮಗಳೂರು— ಡಿಸೆಂಬರು 19 ರಂದು ನಡೆದ ಪೋಲೀಸು ದಬ್ಬಾಳಿಕೆಗಾಗಿ ನಿನ್ನೆ ಇಲ್ಲಿ ಹರತಾಳ ಆಚರಿಸಲಾಯಿತು.

○

ವಿಗ್ರಹ ಕಳವು

ಗ್ವಾಲಿಯರ್— ಗ್ವಾಡಿಯರ್ ಕೋಟೆಯ ಸೂರ್ಯಕುಂಡದಿಂದ ಹಿತ್ತಾಳೆಯ 15 ಕೆಜಿ ತೂಕದ ಸೂರ್ಯದೇವರ ವಿಗ್ರಹವು ಕಳುವಾಗಿದೆ.

○

ಮಹಾತ್ಮಾ ಗಾಂಧಿ ಸೇವಾ ಸಂಘ

ಮೈಸೂರು— ಮೇಲ್ಕಂಡ ಸಂಘದ ಆಶ್ರಯದಲ್ಲಿ ಟೌನ್‌ಹಾಲ್‌ನಲ್ಲಿ ತಾ|| 11 ಭಾನುವಾರ ಸಂಜೆ 5 ಗಂಟೆಗೆ 23 ನೇ ಮಹಾತ್ಮಾ ಗಾಂಧಿ ಸ್ಮಾರಕ ಶಾಂತಿ ಸಮಾರಂಭ ಏರ್ಪಡಿಸಲಾಗಿದೆ ; ಗೌರ್ನರ್ ಶ್ರೀ ಧರ್ಮವೀರರವರು ಉದ್ಘಾಟನಾ ಭಾಷಣ ಮಾಡುವರು.

Society of Goodness

A Society by the name of **Society of Goodness Appreciation** has been established [72 North Vijayanagar, Agra, U.P. India] with a view to encourage and popularise the goodness of men and creative spiritualism amongst the masses. Promulgation of Bhakti Yoga in foreign countries will be its another main function. Theory of one God and one mankind are the main basis of the entire activities of the Society, in International masses. A big yeyrly publication entitled 'Great Qualities of Great Persons of the world' and and its diversified small editions will be sold on cost to cost basis. In general public, the approach to pursuade people to adopt good qualities will be made through posters etc.

ಮಹಾಜನ ವರದಿ ಜಾರಿಗೆ ಬರಲಿ

ಕ್ಷೀಸ್ರನಃ ಮಹಾಜನ ಕಮಿಷ್ಟ ಶಿಫಾರಸುಗಳ ಕಾರ್ಯಾಚರಣೆ ಮಾಡುವಂತೆ ಕೇಂದ್ರ ಸರಕಾರಕ್ಕೆ ಆಗ್ರಹ ಪಡಿಸಲು ಬರುವ ಫೆಬ್ರವರಿ ತಿಂಗಳಲ್ಲಿ ಧುಧನಿಯಲ್ಲಿ ಗಡಿ ಭಾಗಗಳ ಕನ್ನಡಿಗರ ಮಹಾಸಮ್ಮೇಳನ ಸೇರಲಿದೆ ಎಂದು. ಹುಬ್ಬಳ್ಳಿ ವಾರ್ತೆ.

ಪುಡ್‌ಲ್ಯಾಂಡ್ ಶಾ. 2-1-70 ರಿಂದ

ಶಿ ನ ಅಮೋಘ ಪ್ರಾರಂಭ

ಒರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆ ಜೆ ಪೂ ಜೆ

ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

ನಿರ್ದೇಶನ : ಪುಟ್ಟಣ್ಣ ಕಣಗಾಲ್ ಸಂಗೀತ : ವಿಜಯ ಭಾಸ್ಕರ್

[ದಿನ 3 ಪ್ರದರ್ಶನಗಳು]

ಅಪೆರಾ— ಅನೋಘ 2ನೇ ವಾರ

.... ಅತ್ಯಮೋಘ ಹಿಂದಿ ಚಿತ್ರ .....

ನನ್ನ ಘರಿಷ್ಟೆ

ನಿರ್ದೇಶನ ಟಿ. ಪ್ರಕಾಶರಾವ್ ಸಂಗೀತ ಕಲ್ಯಾಣಜಿ ಆನಂದಜಿ (ಕಲರ್)

ದಿನ 3 ಆಟಗಳು



Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣಕ್ಕೆ ಬೆಂಬಲ ನೀಡಿ

protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M. S. Krishna Rao (Proprietor) at the Satyavadi Press Chamarajapura, Mysore